ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ೧೮೦

ಆ) ಆರು ಪ್ರಾಥಮಿಕ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ.

ಇ) ಈ ಪಾಠಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೋಸ್ಕರ ೧೯೬೪-೬೫ರ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿ ಕೊಡುವ ಬಗ್ಗೆ ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಗುತ್ತಿಗಾರು ಪ್ರೌಢಶಾಲೆಯ ಕಟ್ಟಡದ ಬಗ್ಗೆ

೧೫೧. ಶ್ರೀ ಬಾಕೀಲ ಹುಕ್ರಪ್ಪ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸುಳ್ಯ ಕ್ಷೇತ್ರದ ಗುತ್ತಿಗಾರು ಎಂಬಲ್ಲಿ ೧೯೬೨ರಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಮಂಜೂರು ಆಗಿದ್ದು ಈ ಶಾಲೆಗೆ ಕಟ್ಟಡ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಯಾವಾಗ ಕಟ್ಟಡವನ್ನು ಒದಗಿಸುತ್ತಿರಿ?

ಆ) ಹಾಗಿದ್ದಲ್ಲಿ, ಈ ವರ್ಷ ಮಂಜೂರಾದ ಪ್ರೌಢಶಾಲೆಗೆ ಕಟ್ಟಡವನ್ನು ನಿರ್ಮಿಸಲಾಗುವುದೇ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಹೌದು. ೬೪-೬೫ರಲ್ಲಿ ಸಾಧ್ಯವಾಗಬಹುದು.

ಆ) ಆರ್ಥಿಕ ಮುಗ್ಗಟ್ಟಿನಿಂದ ಸಧ್ಯಕ್ಕೆ ಸಾಧ್ಯವಾಗುವುದಿಲ್ಲ.

ಬಾಗೆಪಲ್ಲಿ ತಾಲ್ಲೂಕಿನಲ್ಲಿ ಪಂಚಾಯಿತಿ ಕಟ್ಟಡ ಕಟ್ಟುವ ಬಗ್ಗೆ

೧೧೨ (೧೬೬) ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಅ) ಬಾಗೇಪಲ್ಲಿ ತಾಲ್ಲೂಕು, ಚೋಳೂರು ಹೋಬಳಿ ಜಲಪಿಗಾರಪಲ್ಲಿ ಪಂಚಾಯತಿ ಕೇಂದ್ರ ಯಾವುದು?

ಆ) ಕಾನೂನು ರೀತ್ಯಾ ಪಂಚಾಯತಿ ಕಟ್ಟಡವನ್ನು ಎಲ್ಲಿ ಕಟ್ಟಬೇಕೆಂಬುದಾಗಿ ಸರ್ಕಾರದ ಆದೇಶವೇನಾದರು ಇದೆಯೆ?

ಇ) ಈ ಜಲಪಿಗಾರಪಲ್ಲಿ ಪಂಚಾಯತಿಗೆ ಪಂಚಾಯತಿ ಕಟ್ಟಡ ಮಂಜೂರಾಗಿದೆಯೆ? ಮಂಜೂರಾತಿ ಆಗಿದ್ದಲ್ಲಿ ಕಟ್ಟಡ ಎಲ್ಲಿ ತಯಾರಾಗುತ್ತಿದೆ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು).—

ಅ) ಜಲಪಿಗಾರಪಲ್ಲಿ ಗ್ರಾಮವು ಪಂಚಾಯತಿ ಕೇಂದ್ರವಾಗಿರುತ್ತೆ.

ಆ) ಇಲ್ಲ. ಸಾಮಾನ್ಯವಾಗಿ ಪಂಚಾಯತಿ ಕಟ್ಟಡಗಳನ್ನು ಪಂಚಾಯತಿ ಕೇಂದ್ರ ಸ್ಥಾನದಲ್ಲಿಯೇ ಕಟ್ಟಲಾಗುತ್ತಿದೆ.

ಇ) ಮಂಜೂರಾತಿ ಆಗಿದೆ. ಈ ಪಂಚಾಯತಿ ವ್ಯಾಪ್ತಿಗೆ ಸೇರಿದ ಮುದ್ದಲಪಲ್ಲಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿದೆ.